ಊ)	ಕೇಂದ್ರ ಸರ್ಕಾರಿ ನೌಕರರು ಮತ್ತು ಸ್ವಾಮ್ಯತೆಗೊಳಪಟ್ಟಿರುವ ಸಾರ್ವಜನಿಕ ಉದ್ದಿಮೆಗಳು ಮತ್ತು ಕೇಂದ್ರ ಅಥವಾ ರಾಜ್ಯ ಸರ್ಕಾರದ ಆಧೀನ ಅಥವಾ ಮೇಲ್ವಿಚಾರಣೆಯಲ್ಲಿನ ಸಂಸ್ಥೆಗಳು	8
ಋ)	ಅಂಗವಿಕಲರು	2
ೠ)	ಸಾರ್ವಜನಿಕರಿಗೆ	52
ಎ)	ಪ್ರಾಧಿಕಾರದ ವಿವೇಚನಾ ಪ್ರವರ್ಗದಡಿಯಲ್ಲಿ ಅಂದರೆ ಕಲೆ, ವಿಜ್ಞಾನ ಅಥವಾ ಕ್ರೀಡೆಗಳಲ್ಲಿ ಅಥವಾ ಇನ್ನಾವುದೇ ರಂಗಗಳಲ್ಲಿ ಸಾಧನೆಗೈದಿರುವ ವ್ಯಕ್ತಿಗಳಿಗೆ	5

ಆಂಗ್ಲೋ ಇಂಡಿಯನ್ ಸಮುದಾಯದ ಸದಸ್ಯರಿಗಾಗಿ ಯಾವುದೇ ನಿರ್ದಿಷ್ಟ ಮೀಸಲಾತಿ ಇರುವುದಿಲ್ಲ. ಆದಾಗ್ಯೂ ಈ ಸಮುದಾಯದ ಸದಸ್ಯರು ಮೇಲಿನ ಯಾವುದೇ ವರ್ಗಕ್ಕೆ ಸೇರಿದವರಾಗಿದ್ದಲ್ಲಿ ಸೌಲಭ್ಯವನ್ನು ಪಡೆಯಬಹುದಾಗಿದೆ.

SRI J.A. FERNANDEZ : Mr. Speaker Sir, our community over the last forty five years has made a tremendous contribution in the filed of Posts and Telegraphs, Railways, Armed Serivces etc., I appeal to the Hon'ble Chief Minister through the Hon'ble Speaker to provide us a colony, so that we can bring up the less fortunate members of the community. According to the reply made by the Government, 62% lives in slums. We require some help from the Government to pull us up for the services we have rendered over the years.

ಶ್ರೀ ಹೆಚ್.ಡಿ. ದೇವೇಗೌಡ : ಈಗಾಗಲೇ ಬಿ.ಡಿ.ಎ.ನಲ್ಲಿ ಯಾವ ಯಾವ ಕೆಟಾಗರಿಗಳಿಗೆ ಸೈಟುಗಳನ್ನು ಕೊಡಬೇಕು ಎನ್ನುವ ಬಗ್ಗೆ ಒಂದು ನಿಯಮ ಇದೆ. ಈಗ ಅವರು ಏನು ಹೇಳುತ್ತಿದ್ದಾರೋ, ಆ ಕೆಟಾಗರಿಗಳನ್ನು ಸೇರಿಸುವುದಕ್ಕೆ ಸಾಧ್ಯವೇ ಎನ್ನುವುದನ್ನು ನೋಡುತ್ತೇನೆ.

SRI J.A. FERNANDEZ : Can I have the answer in English?

MR. SPEAKER : Please meet me in my office, I will explain. I will stand by you to seek redressal for your problem. I am with you to get solution for this problem. I am with you to get solution for this problem. Please come on a meet me in my office.

ಗಡಿ ಪ್ರದೇಶಗಳಿಂದ ನೆರೆ ರಾಜ್ಯಗಳಿಗೆ ಸಾರಾಯಿಯ ಕಳ್ಳ ಸಾಗಾಣಿಕೆ

232 - ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಮಾನ್ಯ ಅಬಕಾರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿನ ಗಡಿ ಪ್ರದೇಶಗಳಿಂದ ನೆರೆ ರಾಜ್ಯವಾದ ಆಂಧ್ರಕ್ಕೆ ಕಳ್ಳತನದಿಂದ 'ಅರ್ಯಾಕ್' ಹೇರಳವಾಗಿ ಹರಿದು ಹೋಗುತ್ತಿರುವ ವಿಷಯ ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಅ) ಈ ಸಾರಾಯಿ ಕಳ್ಳತನದಿಂದ ಸದರಿ ಗಡಿ ಪ್ರದೇಶಗಳಲ್ಲಿ ಹಲವಾರು ರಾಜಕೀಯ ಮತ್ತು ಸಾಮಾಜಿಕ ಸಮಸ್ಯೆಗಳು ಉದ್ಭವಿಸುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಈ ವಿಷಯಗಳಲ್ಲಿ ಸರಕಾರದವರು ಕೈಗೊಳ್ಳುವ ಕ್ರಮಗಳೇನು?

ಶ್ರೀ ತಿಪ್ಪೇಸ್ವಾಮಿ (ಅಬಕಾರಿ ಸಚಿವರು) :

ಅ) ಬಂದಿದೆ, ರಾಜ್ಯದ ಬಳ್ಳಾರಿ ಜಿಲ್ಲೆಯಲ್ಲಿ ಈ ಬಗ್ಗೆ 59 ಮೊಕದ್ದಮೆಗಳನ್ನು ದಾಖಲು ಮಾಡಲಾಗಿದೆ. ಉಳಿದ ಜಿಲ್ಲೆಗಳಲ್ಲಿ ಈ ಬಗ್ಗೆ ಯಾವ ಪ್ರಕರಣಗಳು ಕಂಡು ಬರುವುದಿಲ್ಲ.

ಆ) ಇಲ್ಲ

ಇ) ಕಳ್ಳತನದಿಂದ ಸಾರಾಯಿ ಸಾಗಣೆಯಾಗುವುದನ್ನು ತಡೆಗಟ್ಟಲು ಕಟ್ಟುನಿಟ್ಟಾದ ಕ್ರಮಗಳನ್ನು ಸರ್ಕಾರವು ತೆಗೆದುಕೊಳ್ಳುತ್ತದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೇ, ಅವರು ಉತ್ತರವನ್ನು ಒದಗಿಸಿದ್ದಾರೆ. ಆದರೆ ಎರಡು ವಿಷಯಗಳಲ್ಲಿ ನನಗೆ ಅನುಮಾನ ಬಂದಿದೆ. ನಮ್ಮ ಅಬ್ಕಾರಿ ಮಂತ್ರಿಗಳಿಗೆ ಆಂಧ್ರಾಪ್ರದೇಶಕ್ಕೆ ಹೊಂದಿಕೊಂಡಿರುವಂತಹ ಜಿಲ್ಲೆಗಳು ಎಷ್ಟು ಇವೆ ಎಂಬುದು ಗೊತ್ತಿದೆಯೋ ಅಥವಾ ಅದರ ಅವಶ್ಯಕತೆ ಇದರಲ್ಲಿ ಇಲ್ಲವೆಂದೂ ಏನೂ ನನಗೆ ಗೊತ್ತಿಲ್ಲ. ಬಳ್ಳಾರಿ ಜಿಲ್ಲೆಯಲ್ಲಿ ಮಾತ್ರ 59 ಮೊಕದ್ದಮೆಗಳನ್ನು ಹೂಡಲಾಗಿದೆ ಎಂದು ಹೇಳಿದ್ದಾರೆ. ಗುಲ್ಬರ್ಗಾ, ಬೀದರ್, ರಾಯಚೂರು, ಚಿತ್ರದುರ್ಗ, ತುಮಕೂರು, ಕೋಲಾರ ಇವೆಲ್ಲಾ ಆಂಧ್ರದ ಗಡಿಗೆ ಹೊಂದಿಕೊಂಡಿರತಕ್ಕದ್ದು. ಈ ಎಲ್ಲಾ ಜಿಲ್ಲೆಗಳಿಂದ ಹೇರಳವಾಗಿ ಸಾರಾಯಿ ಆಂಧ್ರಾಕ್ಕೆ ಹೋಗುತ್ತಿದೆ. ನನಗೆ ಗೊತ್ತಿರುವ ಅಂಕಿಅಂಶಗಳ ಪ್ರಕಾರ ಕೋಲಾರಜಿಲ್ಲೆ ಒಂದರಿಂದ 10 ಲಕ್ಷ ರೂ.ಗಳ ಸಾರಾಯಿ ಆಂಧ್ರಾಪ್ರದೇಶಕ್ಕೆ ಹೋಗುತ್ತಿದೆ. ಇದರ ಬಗ್ಗೆ ಯಾವುದೇ ಮಾಹಿತಿಯನ್ನು ಮಂತ್ರಿಗಳು ಕೊಟ್ಟಿಲ್ಲ. ಯಾವ ಯಾವ ಜಿಲ್ಲೆಗಳಿಂದ ಹೋಗುತ್ತದೆ ಎಂಬುದನ್ನು ಕೊಟ್ಟಿಲ್ಲ. ಇದರ ಜೊತೆಗೆ ಇನ್ನು ಒಂದು ಆಶ್ಚರ್ಯವಾಗಿರತಕ್ಕಂಥದ್ದು ಈ ಸಾರಾಯಿ ಕಳ್ಳತನದಿಂದ ಸದರಿ ಗಡಿಪ್ರದೇಶಗಳಲ್ಲಿ ಹಲವಾರು ರಾಜಕೀಯ ಮತ್ತು ಸಾಮಾಜಿಕ ಸಮಸ್ಯೆಗಳು ಉದ್ಭವವಾಗುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೆ? ಎಂದು ಕೇಳಿದರೆ 'ಇಲ್ಲ'ವೆಂದು ಹೇಳಿದ್ದಾರೆ. ಇದು ನನಗೆ ಬಹಳ ವಿಷಾದನೀಯವೆನಿಸುತ್ತದೆ. ಮಾನ್ಯ ಮಂತ್ರಿಗಳು ಈ ರೀತಿಯಾದಂತಹ ಉತ್ತರವನ್ನು ಕೊಡುತ್ತಾರೆಂದು ನಾನು ನಿರೀಕ್ಷೆ ಮಾಡಿರಲಿಲ್ಲ. ಅವರಿಗೆ ಗೊತ್ತಿದೆ, ಗಡಿ ಪ್ರದೇಶಗಳಲ್ಲಿ ಇರುವಂತಹ ಜಿಲ್ಲೆಗಳಲ್ಲಿ ಡಕಾಯಿತಿಯಾಗುತ್ತದೆ. ಪೊಲೀಸ್‌ನವರು ಕೇಸ್ ರಿಜಿಸ್ಟರ್ ಮಾಡುತ್ತಾರೆ. ಕಳ್ಳತನವಾಗುತ್ತದೆ, ಜೂಜು, ವೇಶ್ಯಾವಾಟಿಕೆ ಹೆಚ್ಚಾಗಿದೆ. ಪೋಲೀಸಿನವರು ನಿಷ್ಕ್ರಿಯರಾಗಿದ್ದು, ಎಕ್ಸೈಟ್ ಡಿಪಾರ್ಟಮೆಂಟ್‌ನವರಿ ಅರ್ಯಾಕ್ ಕಂಟ್ರಾಕ್ಟರ್‌ಗಳ ಜೊತೆಗೆ ಶ್ಯಾಮಿಲಾಗಿ ಎಕ್ಸೈಸ್ ಡಿಪಾರ್ಟ್‌ಮೆಂಟ್ ಜೀಪ್‌ಗಳಲ್ಲಿ ಆಂಧ್ರಾಪ್ರದೇಶಕ್ಕೆ ಗಡಿಪ್ರದೇಶಗಳಿಗೆ ಸಾರಾಯಿಯನ್ನು ಸಾಗಿಸುತ್ತಿದ್ದಾರೆ. ನಾನು ಈ ವಿಷಯವನ್ನು ಮಾನ್ಯ ಗೃಹ ಮಂತ್ರಿಗಳ ಮುಂದೆ ಕೂಡ ಕಳೆದ ಸದನದ ಸಂದರ್ಭದಲ್ಲಿ ಪ್ರಸ್ತಾಪ ಮಾಡಿದ್ದೆ. ಆಗ ಅವರು ನಾನು ಸಂಬಂಧಪಟ್ಟ ಅಧಿಕಾರಿಗಳ ಸಭೆಯನ್ನು ಕರೆಯುತ್ತೇನೆ, ಆಗ ತಮ್ಮನ್ನು ಕರೆಯುತ್ತೇನೆಂದು ಹೇಳಿದ್ದರು. ಅದು ಏನಾಯಿತೆಂದು ಗೊತ್ತಾಗಲಿಲ್ಲ. ಅವರು ಸಭೆಯನ್ನು ಕರೆದಿದ್ದಾರೋ ಇಲ್ಲವೋ ಎಂಬುದು ಗೊತ್ತಿಲ್ಲ. ಆದರೆ ಮೊನ್ನೆ 28ನೇ ತಾರೀಖಿನ ಪತ್ರಿಕೆಯಲ್ಲಿ ಕೋಲಾರ ಜಿಲ್ಲೆಯ ನನ್ನ ಕ್ಷೇತ್ರವಾದ ಬಾಗೇಪಲ್ಲಿಯ ಒಂದು ಹಳ್ಳಿಯಲ್ಲಿ ನಕ್ಸಲಿಯರು ಬಂದು ಜೀಪಿಗೆ ಬೆಂಕಿ ಹಾಕಿ ಸಾರಾಯಿ ಪ್ಯಾಕೆಟ್‌ಗಳನ್ನು ಸುಟ್ಟು ಹಾಕಿದ್ದಾರೆಂದು

ಬಂದಿದೆ. ಇದು ಒಂದು ದೊಡ್ಡ ಸಮಸ್ಯೆಯಾಗಿ ಅಲ್ಲಿನ ಜನರು ಭಯಭೀತರಾಗಿ ಊರುಗಳನ್ನು ಬಿಡುವಂತಹ ಪರಿಸ್ಥಿತಿ ಬಂದಿದೆ. ಎಕ್ಸೈಜ್ ಇಲಾಖೆಯ ಇನ್ಸ್‌ಪೆಕ್ಟರ್‌ರವರನ್ನು ಎರಡು ತಿಂಗಳುಗಳಿಂದ ಹುಡುಕುತ್ತಿದ್ದೇವೆ. ಅವರು ಎಲ್ಲಿ ಇದ್ದಾರೋ ಅವರ ಪತ್ತೆ ಇಲ್ಲ. ಸಾರಾಯಿಯನ್ನು ಆಂಧ್ರಕ್ಕೆ ಇಲಾಖೆಯ ಜೀಪಿನಲ್ಲಿಯೇ ಸಾಗಿಸುತ್ತಾರೆ.

MR. SPEAKER : Hon. member may ask Specific supplementaries.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಸ್ವಾಮಿ, ಇಷ್ಟೆಲ್ಲಾ ಆಗಿದ್ದರೂ ಮಂತ್ರಿಗಳು ತಮ್ಮ ಗಮನಕ್ಕೆ ಬಂದಿಲ್ಲವೆಂದು ಹೇಳುತ್ತಾರಲ್ಲಾ! ಇದಕ್ಕೆ ವಿಷಾದವಾಗುತ್ತದೆ. ಜಿಲ್ಲೆಗಳಲ್ಲಿ ಏನೇನು ಆಗುತ್ತಿದೆ ಎಂಬುದು ಗಮನಕ್ಕೆ ಬಂದಿಲ್ಲವೆಂದರೆ ಬಹಳ ಕಷ್ಟವಾಗುತ್ತದೆ. ಇದರಿಂದ ತೀವ್ರವಾದಂತಹ ಪರಿಸ್ಥಿತಿ ಉದ್ಭವವಾಗುತ್ತದೆ. ಈ ಗಡಿ ಪ್ರದೇಶಗಳಲ್ಲಿ ನಡೆಯುವಂಥ ಸಾರಾಯಿ ಕಳ್ಳಸಾಗಣಿಕೆ ಬಗ್ಗೆ ಸರ್ಕಾರ ಯಾವುದೇ ಗಮನವನ್ನು ತೆಗೆದುಕೊಂಡಿಲ್ಲ. ಕಡೆಯ ಪ್ರಶ್ನೆ (ಇ) ನಲ್ಲಿ ಕಳ್ಳತನದಿಂದ ಸಾರಾಯಿ ಸಾಗಣೆಯಾಗುವುದನ್ನು ತಡೆಗಟ್ಟಲು ಕಟ್ಟುನಿಟ್ಟಾದ ಕ್ರಮಗಳನ್ನು ಸರ್ಕಾರವು ತೆಗೆದುಕೊಳ್ಳುತ್ತದೆ ಎಂದು ಹೇಳಿದ್ದಾರೆ. ಬೇರೆ ಜಿಲ್ಲೆಗಳ ಬಗ್ಗೆ ಪ್ರಸ್ತಾಪವಿಲ್ಲ, ಹಾಗಾದರೆ ಬೇರೆ ಜಿಲ್ಲೆಗಳಲ್ಲಿ ಕಳ್ಳಸಾಗಾಣಿಕೆಯಾಗುವುದೇ ಇಲ್ಲವೆ? ಮೊಕದ್ದಮೆಗಳನ್ನು ಹಾಕಿಲ್ಲವೇ, ಇದರ ಪರಿಸ್ಥಿತಿ ಏನು ಎಂಬುದು ಬೇಕಾಗುತ್ತದೆ.

ಶ್ರೀ ತಿಪ್ಪೇಸ್ವಾಮಿ : ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಬಹಳ ಒಳ್ಳೆಯ ಪ್ರಶ್ನೆಯನ್ನು ಕೇಳಿದ್ದಾರೆ. ತಮಗೆ ನಮ್ಮಲ್ಲಿ ಇರುವಂತಹ ಸ್ಟಾಫ್‌ಗಳ ಬಗ್ಗೆ ಹೇಳಬೇಕಾದರೆ, ಒಂದು ತಾಲ್ಲೂಕಿಗೆ ಒಬ್ಬ ಇನ್ಸ್‌ಪೆಕ್ಟರ್, ಒಬ್ಬ ಸರ್ಕಲ್ ಇನ್ಸ್‌ಪೆಕ್ಟರ್, ಮೂರು ಜನ ಗಾರ್ಡ್‌ಗಳು ಇರುತ್ತಾರೆ. ಇದರಲ್ಲಿ ಎಷ್ಟು ಕಾಯಬಹುದು, ಎಷ್ಟು ಮಾಡಬಹುದು? ಅವರು ಸಾಕಷ್ಟು ಶ್ರಮಪಟ್ಟು ಈಗ ಬಳ್ಳಾರಿಯಲ್ಲಿ ಕೆಲಸ ಮಾಡಿದ್ದರಿಂದ ಇಷ್ಟು ದಾಖಲಾಗಿರುವಂತಹ ಕೇಸ್‌ಗಳು ಸಿಕ್ಕಿವೆ. ಅದರ ಮೇಲೆ ಕ್ರಮವನ್ನು ತೆಗೆದುಕೊಂಡಿದ್ದೇವೆ. ಮತ್ತು ಅವರ ಮೇಲೆ ಕೇಸ್‌ಗಳನ್ನು ಹಾಕಿದ್ದೇವೆ. ಮಾನ್ಯ ಸದಸ್ಯರು ಹೇಳಿರುವಂತಹ ವಿಷಯದಲ್ಲಿ ಸತ್ಯಾಂಶವಿರಬಹುದು ಇಲ್ಲವೆಂದು ಹೇಳುವುದಿಲ್ಲ. ಮುಂದಿನ ದಿವಸಗಳಲ್ಲಿ ಗಡಿನಾಡ ಜಿಲ್ಲೆಗಳು ಏನಿವೆ ಅದರ ಉದ್ದಕ್ಕೂ ಸಹ ನಾನು ವಿಶೇಷವಾದ ಗಮನಹರಿಸುತ್ತೇನೆ. ಇಂತಹ ಕ್ರಮಗಳನ್ನು ಆದಷ್ಟು ತಡೆಗಟ್ಟುವುದಕ್ಕೆ ನಮ್ಮ ಮತಿಯಿಂದ ಪ್ರಾಮಾಣಿಕವಾದ ಪ್ರಯತ್ನವನ್ನು ಮುಂದಿನ ದಿವಸಗಳಲ್ಲಿ ಮಾಡುತ್ತೇವೆ. ಆಗುತ್ತಿರುವಂತಹ ಅನ್ಯಾಯಗಳನ್ನು ತಡೆಗಟ್ಟುವುದಕ್ಕೆ ನಮ್ಮ ಅಧಿಕಾರಿಗಳಿಗೆ ಆದೇಶವನ್ನು ಕೊಟ್ಟು ಎಲ್ಲಾ ಕ್ರಮಗಳು ವ್ಯವಸ್ಥಿತವಾಗಿ ಪ್ರಾಮಾಣಿಕವಾಗಿ ಮಾಡುತ್ತೇವೆಂದು ತಮ್ಮ ಮೂಲಕ ಸದಸ್ಯರಿಗೆ ತಿಳಿಯಪಡಿಸುತ್ತೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮತ್ತೊಂದು ವಿಚಾರ ತಮ್ಮ ಗಮನಕ್ಕೆ ತರುವುದೆನೆಂದರೆ ಅರ್ಯಾಕ್ ಕಂಟ್ರಾಕ್ಟ್‌ದಾರರು ಯಾರು ಇದ್ದಾರೆ. ಅವರು ಎಲ್ಲಿ ಹರಾಜಿನಲ್ಲಿ ಕೂಗುತ್ತಾರೋ ಅಲ್ಲಿ ಸಾರಾಯಿಯನ್ನು ಇಲ್ಲದ ಹಾಗೆ ಮಾಡಿ, ಇಡೀ ಸಾರಾಯಿಯನ್ನು ಆಂಧ್ರಾ ಪ್ರದೇಶಕ್ಕೆ ಸಾಗಿಸಿ ಬಿಟ್ಟು ಅಲ್ಲಿ ಅವರೇ ಮಾರಾಟ ಮಾಡುತ್ತಾರೆ. ಇದಕ್ಕೆ ಇಲಾಖೆಯವರೇ ಶಾಮೀಲಾಗಿರುತ್ತಾರೆ. ಇದರಿಂದ ಸರ್ಕಾರಕ್ಕೆ ಲಕ್ಷಾಂತರ ರೂಪಾಯಿಗಳ ನಷ್ಟವಾಗುತತ್ತೆ. ಈ ದೃಷ್ಟಿಯಿಂದಲಾದರೂ ತಾವು ಕ್ರಮ ತೆಗೆದುಕೊಳ್ಳದೇ ಹೋದರೆ, ಎಲ್ಲಾ ಅಂಶಗಳಲ್ಲೂ ವಿಫಲವಾದ ಹಾಗೆ ಆಗುತ್ತದೆ.

ಶ್ರೀ ತಿಪ್ಪೇಸ್ವಾಮಿ : ಮಾನ್ಯ ಸದಸ್ಯರು ಹೇಳಿದ ಹಾಗೆ, ನಮ್ಮ ಕಂಟ್ರಾಕ್ಟ್‌ದಾರರು ಈ ರೀತಿಯ ಕ್ರಮವನ್ನು ನಡೆಸಿದ್ದು ನಿಜವಾದರೆ, ಅವರ ಲೆಸನ್ಸ್ ರದ್ದು

ಮಾಡುವುದಕ್ಕೆ ನಮಗೆ ಅಧಿಕಾರ ಇದೆ. ಮತ್ತು ಕ್ರಮ ತೆಗೆದುಕೊಳ್ಳುವುದಕ್ಕೆ ನಾವು ಹಿಂದೆ ಬೀಳುವುದಿಲ್ಲವೆಂಬ ಮಾತನ್ನು ಹೇಳುತ್ತೇನೆ.

ಸಚಿವರು ಮತ್ತು ಅಧಿಕಾರಿಗಳಿಗಾಗಿ ಕರ್ನಾಟಕ ಭವನ

418 - ಶ್ರೀ ಕೆ. ಜಯರಾಮ ಶೆಟ್ಟಿ (ಉಳ್ಳಾಲ) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ನವದೆಹಲಿಯಲ್ಲಿರುವ ಕರ್ನಾಟಕ ಭವನಗಳಲ್ಲಿ ಕಳೆದ ಒಂದು ವರ್ಷದಲ್ಲಿ ರಾಜ್ಯ ಸರ್ಕಾರ ವಸತಿ, ಊಟ ಸೌಕರ್ಯಗಳಿಗಾಗಿ ಮಾಡಿದ ಖರ್ಚು ವೆಚ್ಚಗಳೆಷ್ಟು?

ಆ) ಇದರಲ್ಲಿ ಸಚಿವರುಗಳಿಗೆ, ಶಾಸಕರುಗಳಿಗೆ, ಸರ್ಕಾರಿ ಅಧಿಕಾರಿಗಳಿಗೆ ವೆಚ್ಚ ಮಾಡಿದ ಹಣವೆಷ್ಟು?

ಇ) ಸಚಿವರುಗಳು ಅಥವಾ ಅಧಿಕಾರಿಗಳು ಹೆಸರಿಗೆ ಮಾತ್ರ ತಂಗಿದ್ದು ವಸತಿಗಳನ್ನು ತನ್ನ ಆಪ್ತೇಷ್ಟರಿಗೆ ಕೊಟ್ಟು ಅವರು ದುಬಾರಿ ವಿಲಾಸಿ ಹೋಟೆಲುಗಳಲ್ಲಿ ತಂಗುವ ವಿಷಯ ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಗಳು) :

ಅ) ರೂ. 118.26 ಲಕ್ಷ

ಆ) ರೂ. 88.75 ಲಕ್ಷ

ಇ) ಇಂಥಹ ಪ್ರಕರಣಗಳು ಗಮನಕ್ಕೆ ಬಂದಿರುವುದಿಲ್ಲ.

ಶ್ರೀ ಕೆ. ಜಯರಾಮಶೆಟ್ಟಿ : ಸನ್ಮಾನ್ಯ ಅಧ್ಯಕ್ಷರೇ, ರಾಜ್ಯ ಸರ್ಕಾರ 118.26 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ ಎಂದು ಹೇಳಿದೆ. ಆದರೆ ಈ ಖರ್ಚು ಯಾವುದರ ಬಗ್ಗೆ, ಯಾವುದಕ್ಕೆ ಎಷ್ಟು ವೆಚ್ಚ ಮಾಡಲಾಗಿದೆ ಎಂಬುದನ್ನು ಹೇಳಬೇಕು. ಕರ್ನಾಟಕ ಭವನ ದೇಶದಲ್ಲಿ ಯಾವ ಯಾವ ರಾಜ್ಯಗಳಲ್ಲಿ ಇದೆ. ಸರ್ಕಾರ ಎಲ್ಲಾ ರಾಜ್ಯಗಳಲ್ಲಿಯೂ ಕರ್ನಾಟಕ ಭವನದ ವ್ಯವಸ್ಥೆಯನ್ನು ಮಾಡುತ್ತದೆ ಎನ್ನುವ ಉತ್ತರವನ್ನು ನಾನು ಅಪೇಕ್ಷೆ ಮಾಡುತ್ತಿದ್ದೇನೆ. ದೆಹಲಿಯಲ್ಲಿರುವ ಕರ್ನಾಟಕ ಭವನದಲ್ಲಿ ಕೆಲವು ಸಲ ಮಂತ್ರಿಗಳು ಅಧಿಕಾರಿಗಳು ಅಲ್ಲಿಗೆ ಬಂದಾಗ ಶಾಸಕರುಗಳಿಗೆ ಅಲ್ಲಿ ಪ್ರಾಶಸ್ತ್ಯ ಸಿಗದೇ ಇರುವಂತಹ ವಿಚಾರಗಳು ನನ್ನ ಗಮನಕ್ಕೆ ಬಂದಿದೆ. ಈ ರೀತಿಯಾದಾಗ ಸರ್ಕಾರ ಇಂತಹ ತೊಂದರೆಗಳನ್ನು ನಿವಾರಿಸುವುದಕ್ಕೆ ಯಾವ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತದೆ. ಹೊಸದಾಗಿ ಶಾಸಕರು ದೆಹಲಿಗೆ ಅಥವಾ ರಾಜ್ಯದ ಬೇರೆ ಬೇರೆ ಭಾಗಗಳಿಗೆ ಹೋದಾಗ, ಅವರಿಗೆ ಅಲ್ಲಿನ ಇಲಾಖೆಯ ಅಧಿಕಾರಿಗಳನ್ನು ಅಲ್ಲಿನ ರಾಜ್ಯದ ಮಂತ್ರಿಗಳನ್ನು ಕಂಡು ಮಾತನಾಡುವುದಕ್ಕೆ ಬೇಕಾದಂತಹ ಗೈಡುಗಳ ವ್ಯವಸ್ಥೆಯನ್ನು ಮಾಡುತ್ತದೆಯೆ? ಎಂದು ನಾನು ಸನ್ಮಾನ್ಯ ಮುಖ್ಯಮಂತ್ರಿಯವರನ್ನು ಕೇಳುತ್ತೇನೆ.

ಶ್ರೀ ಹೆಚ್.ಡಿ. ದೇವೇಗೌಡ : ಮಾನ್ಯ ಸದಸ್ಯರು ಹೇಳಿದಂತಹ ವಿಚಾರಗಳಲ್ಲಿ ಕೆಲವು ವಾಸ್ತಾವಾಂಶ ಇದೆ. ದೆಹಲಿಯಲ್ಲಿ ಇರತಕ್ಕಂಥ ಎರಡು ಕರ್ನಾಟಕ ಭವನದಲ್ಲಿ ನಮ್ಮ ರಾಜ್ಯದಿಂದ ಹೋಗುವಂತಹ ಕೆಲವು ಶಾಸಕರುಗಳಿಗೆ, ಎಂಪಿಗಳಿಗೆ, ಮಂತ್ರಿಗಳಿಗೆ ಮತ್ತು ಅಧಿಕಾರಿಗಳಿಗೆ ವಸತಿ ಸೌಕರ್ಯ ಸಿಕ್ಕುವುದಿಲ್ಲವೆಂಬ ಅಂಶ ನಮ್ಮ ಗಮನಕ್ಕೆ ಬಂದಿದೆ. ಒಂದೊಂದು ಸಲ ಕೆಲವು ರಾಜಕೀಯ ಪಕ್ಷಗಳು, ಸಭೆಗಳನ್ನು ನಡೆಸುತ್ತವೆ, ಎಕ್ಸಿಕ್ಯೂಟಿವ್ ಕಮಿಟಿ ಮೀಟಿಂಗ್ ನಡೆಯಬಹುದು ಅಥವಾ ರಾಷ್ಟ್ರೀಯ ಮಟ್ಟದ ಎಂಎಲ್, ಅಧಿಕಾರಿಗಳು ಅಲ್ಲಿಗೆ ಹೋಗತಕ್ಕಂಥ ಪರಿಸ್ಥಿತಿ ಬರಬಹುದು. ರಾಜಕೀಯ ಪಕ್ಷಗಳು ಹೋಗತಕ್ಕಂಥ ಸಂದರ್ಭ ಬರಬಹುದು. ಇಂತಹ ಸನ್ನಿವೇಶದಲ್ಲಿ ರಾಜಕೀಯ